# ಕೃಷಿ – ಕೈಗಾರಿಕೆಯಲ್ಲಿ ತಾಂತ್ರಿಕತೆ: ಕಾರ್ಯಾಗಾರ



ಕಾಸರಗೋಡು, ಜ. 31: ಸಿಪಿಸಿಆರ್‌ಐಯಲ್ಲಿ ಕೃಷಿ–ಕೈಗಾರಿಕೆಯಲ್ಲಿ ತಾಂತ್ರಿಕತೆ ಎಂಬ ವಿಷಯದ ಬಗ್ಗೆ ನಡೆದ ಕಾರ್ಯಾಗಾರವನ್ನು ಮಂಗಳೂರಿನ ಕೆನರಾ ಸ್ಮಾಲ್ ಇಂಡಸ್ಟ್ರೀಸ್ ಅಸೋಸಿಯೇಶನ್ ಅಧ್ಯಕ್ಷ ಎಂ.ಜೆ. ಶೆಟ್ಟಿ ಶನಿವಾರ ಉದ್ಘಾಟಿಸಿದರು.

ಕೃಷಿ ತಾಂತ್ರಿಕತೆಯಲ್ಲಿ ಯುವಜನತೆಗೆ ಸಾಕಷ್ಟು ಅವಕಾಶಗಳಿದ್ದು, ಉದ್ಯೋಗ ಸಾಧ್ಯತೆಯಲ್ಲಿ ವರ್ಧನೆ ಉಂಟಾಗಿದೆ ಎಂದು ಅವರು ಹೇಳಿದರು.

ಸಿಪಿಸಿಆರ್‌ಐ ನಿರ್ದೇಶಕ ಡಾ। ಪಿ. ಚೌಡಪ್ಪ ಅಧ್ಯಕ್ಷತೆ ವಹಿಸಿದರು. ಕೃಷಿಯಲ್ಲೂ ತಾಂತ್ರಿಕತೆಯನ್ನು ಬೆಳೆಸುವ ಮೂಲಕ ಹೆಚ್ಚಿನ ಕೃಷಿ ಉತ್ಪನ್ನಗಳನ್ನು ಪಡೆಯಬಹುದು. ಅಲ್ಲದೆ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಗಳನ್ನು ಕಂಡುಕೊಂಡು ತೆಂಗಿನ ಉತ್ಪಾದನೆಯನ್ನು ಹೆಚ್ಚಿಸಲು ಹೆಚ್ಚಿನ ಗಮನ ಹರಿಸಬೇಕು. ತೆಂಗಿನಿಂದ ಹಲವು ಉತ್ಪನ್ನಗಳನ್ನು ತಯಾರಿಸಲು ಸಾಧ್ಯವಾಗಿದ್ದು ಅದರಲ್ಲಿ ಮುಖ್ಯವಾಗಿ ಕಲ್ಪರಸ (ನೀರಾ) ಕ್ಕೆ ಹೆಚ್ಚಿನ ಮಾರುಕಟ್ಟೆ ಪಡೆಯಲು ಸಾಧ್ಯವಾಗುವುದು ಎಂದು ಅವರು ಅಭಿಪ್ರಾಯಪಟ್ಟರು.

ಕೆನರಾ ಚೇಂಬರ್ ಆಫ್ ಕಾಮರ್ಸ್ ಉಪಾಧ್ಯಕ್ಷ ಎಂ. ರಾಮ್ ಮೋಹನ್ ಪೈ, ಎಂಎಸ್‌ಎಂಇ ಅಸಿಸ್ಟೆಂಟ್ ಡೈರೆಕ್ಟರ್ ಮಾರ್ಟಿನ್ ಚಾಕೋ, ಕಾಸರಗೋಡು ಜಿಲ್ಲಾ ಕೈಗಾರಿಕಾ ಕೇಂದ್ರದ ಮೆನೇಜರ್ ಸಾಮ್ಯೂವೆಲ್, ನಬಾರ್ಡ್ ಎಜಿಎಂ ಜ್ಯೋತಿಷ್ ಜಗನ್ನಾಥ್ ಮೊದಲಾದವರು ಮಾತನಾಡಿದರು.

VeryPDF Demo